## ಬುತ್ತಿ ಚಿಗುರು

### ರುಜುವಾತು!



ಕಾಡಿನ ನಡುವೆ ಒಂದು ದಷ್ಟಪುಷ್ಟವಾದ ಕೋಣ ಗಾಬರಿಯಿಂದ ಓಡೋಡಿ ಬರುತ್ತಿತ್ತು. ಅದರ ಎದುರು ಬಂದ ಇಲಿ, 'ಯಾಕಣ್ಣಾ? ಈ ರೀತಿ ಗಾಬರಿಗೊಂಡು ಓಡ್ತಾ ಇದ್ದೀಯ?' ಎಂದು ಕೇಳಿತು. ಕೋಣ, 'ಅಯ್ಯೋ... ಓಡಿ ಓಡಿ... ಪೊಲೀಸರು ಆನೆ ಹಿಡಿಯಲು ಬರುತ್ತಿದ್ದಾರೆ' ಎಂದಾಗ ಇಲಿ ಬಿದ್ದೂ ಬಿದ್ದೂ ನಗಲಾರಂಭಿಸಿತು. ಕೋಣ, 'ಅದಕ್ಕೆ ಯಾಕಯ್ಯಾ ಹೀಗೆ ನಗ್ತಿದ್ದಿ?' ಎಂದು ಕೇಳಿದಾಗ ಇಲಿ, 'ಅವರು ಆನೆ ಹಿಡಿಯಲು ಬರುತ್ತಿದ್ದಾರೆ... ನೀನೇನು ಆನೇನಾ? ನೀ ಯಾಕೆ ಓಡ್ತಾ ಇದ್ದೀಯಾ? ಅಲ್ಲದೇ ನನಗೂ ಓಡಲು ಹೇಳ್ತಾ ಇದ್ದೀಯಲ್ಲ?' ಎಂದು ಪ್ರಶ್ನಿಸಿತು. ಕೋಣ, 'ಅಯ್ಯೋ, ಮಿತ್ರಾ ಒಮ್ಮೆ ಅವರೇನಾದರೂ ಅಪ್ಪಿತಪ್ಪಿ ನನ್ನನ್ನು ಹಿಡಿದು ಜೈಲಿಗೆ ಹಾಕಿ ಬಿಟ್ಟರೆ, ಆಮೇಲೆ ನಾನು ಆನೆ ಅಲ್ಲ ಕೋಣ ಅಂತ ರುಜುವಾತು ಪಡಿಸಲು ಕನಿಷ್ಠ ಇಪ್ಪತ್ತು ವರ್ಷ ಹೋರಾಡಬೇಕಾಗುತ್ತದೆ. ನಿನ್ನ ಕಥೆಯೂ ಅಷ್ಟೇ...' ಎಂದೆನ್ನುತ್ತ ಅಲ್ಲಿಂದ ಓಡಿ ಹೋಯಿತು.

**ಅರವಿಂದ ಜಿ. ಜೋಷಿ**

---



### ಒಂದು ಪ್ರಶ್ನೇನೂ ಬಿಡದಂಗೆ ಬರಿಬೇಕು

ಸಮಾಜ ವಿಜ್ಞಾನದ ಮೇಷ್ಟ್ರು ಒಂಬತ್ತನೆ ತರಗತಿಯ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಬರೆದಿದ್ದ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿದ್ದರು. ಅವುಗಳನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿದ್ದರು. ಮುರುಳಿಯ ಉತ್ತರ ಪತ್ರಿಕೆ ನೀಡುತ್ತಾ, 'ಲೇ ಮುರಳಿ ಕೊನೆಯಲ್ಲಿ ಆರು ಪ್ರಶ್ನೆಗಳಿಗೆ ಉತ್ತರ ಬರೆಯುವ ಬದಲು ಪ್ರಶ್ನೆಗಳನ್ನೇ ಬರೆದಿದ್ದೀಯಲ್ಲ, ಯಾಕೋ? ಎಂದರು. ಮುರುಳಿ, 'ಸರಸ್ವತಿ ಪೂಜೆಯಲ್ಲಿ ನೀವೆ ಹೇಳಿದ್ರಿ ಸ್ಸಾರ್, ಪರೀಕ್ಷೇಲಿ ಒಂದ್ ಪ್ರಶ್ನೇನೂ ಬಿಡದಂಗೆ ಬರಿಬೇಕು ಅಂತ' ಎಂದ.

**ಮಲ್ಲಿಕಾರ್ಜುನ ಸುರಧೇನುಪುರ**